# ಧೋರಣೆಯಲ್ಲಿ ಬದಲಾವಣೆ

ಅರುಣ್ ವಿ. ಪ್ರಸಾದ್

> "ಇತರರ ಬಗ್ಗೆ ನಮಗೆ ಕಿರಿಕಿರಿಯುಂಟು ಮಾಡುವ ಎಲ್ಲವೂ ನಮ್ಮನ್ನು ನಾವು ಅರಿತುಕೊಳ್ಳಲು ನಮಗೆ ಸಹಾಯ ಮಾಡುತ್ತದೆ"
>
> – ಕಾರ್ಲ್ ಯೂಂಗ್

ಯೂಂಗ್ ಅವರ ಈ ವಾಕ್ಯದ ಪ್ರಕಾರ, ಜೀವನ ಹಲವು ರೀತಿಯಲ್ಲಿ ನಮಗೆ ಸವಾಲನ್ನು ಹಾಕುತ್ತದೆ ಹಾಗೂ ನಮ್ಮನ್ನು ನಾವು ಕಂಡುಕೊಳ್ಳಲು ಇದು ಸಹಾಯ ಮಾಡುತ್ತದೆ. ಇದನ್ನು ವಿವರವಾಗಿ ತಿಳಿದುಕೊಳ್ಳಲು ಒಂದು ಪ್ರಕರಣವನ್ನು ಉದಾಹರಣೆಯಾಗಿ ನಾವು ತೆಗೆದುಕೊಳ್ಳೋಣ.

ಉಧಾಮ್‌ಸಿಂಗ್ ನಗರದಲ್ಲಿರುವ ಅಜೀಂ ಪ್ರೇಂಜಿ ಶಾಲೆಯಲ್ಲಿದ್ದ 15 ಜನ ಹದಿಹರೆಯದವರ ಜೀವನದಲ್ಲಿ 9 ವರ್ಷದ ಒಂದು ಮಗುವಿನ ಪ್ರವೇಶವಾಗುತ್ತದೆ. ಶಾಲೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಮಗುವಿನ ನಡತೆಯನ್ನು ಕುರಿತ ಅಂಶಗಳು ಈ ರೀತಿ ಇವೆ –

- ಶಾಲೆಯ ಕುರಿತಾದ ಹಾಗೂ ಇದರ ಅಗತ್ಯತೆ, ಇದು ಬೇಡುವ ಅಂಶಗಳ ಕುರಿತಾಗಿ ತೀರಾ ಕಡಿಮೆ ವಿಷಯ ಅವಳಿಗೆ ತಿಳಿದಿತ್ತು.
- ವೈದ್ಯಕೀಯವಾಗಿ ಈ ಮಗುವು ಅತ್ಯಂತ ಕಡಿಮೆ ಪ್ರಮಾಣದ ಐಕ್ಯೂ ಹಂತವನ್ನು ಹೊಂದಿತ್ತು.

ಈ ಮಗುವನ್ನು ಆರ್‌ಟಿಇ ನಿಯಮದ ಪ್ರಕಾರ ಶಾಲೆಗೆ ಸೇರ್ಪಡೆ ಮಾಡಿಕೊಳ್ಳಲಾಗಿತ್ತು. ಸ್ವಲ್ಪ ಸಮಯದಲ್ಲೇ ಎಲ್ಲರಿಗೂ ಮಗುವಿನ ಬಗ್ಗೆ ತಿಳಿದ ಅಂಶವೆಂದರೆ

- ಶಾಲಾ ನಿಯಮಗಳು, ಶಾಲೆ ಅವಳಿಂದ ಬಯಸುವ ಪ್ರತಿಕ್ರಿಯೆ ಮತ್ತು ದಿನಚರಿಯ ಅಂಶಗಳ ಬಗ್ಗೆ ಅವಳಿಗೆ ಯಾವುದೇ ಗಮನವಿರಲಿಲ್ಲ.
- ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ಮತ್ತು ನಡತೆಯಲ್ಲಿಯೂ ಕೂಡಾ ಸಮಸ್ಯೆಯನ್ನು ಹೊಂದಿದ್ದಳು.
- ಗೆಳೆಯರೊಂದಿಗಿನ ಅವಳ ವರ್ತನೆ ಕೂಡಾ ಅಷ್ಟೊಂದು ಉತ್ತಮವಾಗಿರಲಿಲ್ಲ
- ಪ್ರಚೋದನೆಗಳು ಅತಿಯಾಗಿದ್ದವು.
- ಕೆಲವೊಮ್ಮೆ ಆಕ್ರಮಣಕಾರಿ ವರ್ತನೆಯನ್ನು ತೋರ್ಪಡಿಸುತ್ತಿದ್ದಳು.
- ಒಂದೇ ಕಡೆ ಕುಳಿತುಕೊಳ್ಳುವುದಿಲ್ಲ.
- ಇತರರಿಂದ ವಸ್ತುಗಳನ್ನು ಕಸಿದುಕೊಳ್ಳುತ್ತಿದ್ದಳು.
- ಅವಳಿಗೆ ಅನಿಸಿದ್ದಲ್ಲೆಲ್ಲ ಮಲಗುತ್ತಿದ್ದಳು ಮತ್ತು ಅವಳು ಶುಚಿತ್ವದ ಬಗ್ಗೆ ಸರಿಯಾದ ತರಬೇತಿಯನ್ನು ಹೊಂದಿರಲಿಲ್ಲ
- ಅವಳಿಗೆ ಪದೇ ಪದೇ ಒಂದು ವಿಷಯದ ಬಗ್ಗೆ ಸೂಚನೆಯನ್ನು ಮತ್ತು ಪುನರ್ಬಲನ (ಪ್ರೇರೇಪಣೆ)ವನ್ನು ನೀಡಬೇಕಾಗುತ್ತಿತ್ತು ಮತ್ತು ನೀಡಿದ ಸೂಚನೆಯನ್ನು ಅರ್ಥ ಮಾಡಿಕೊಳ್ಳುವಂತೆ ಮಾಡಬೇಕಾಗುತ್ತಿತ್ತು.

ಕಿಶೋರಾವಸ್ಥೆಯಲ್ಲಿ ನಾವು ಏನನ್ನಾದರೂ 'ಕಲಿಯಲು' (ಶೈಕ್ಷಣಿಕ ಅಂಶಗಳನ್ನು ಓದಲು), ಮಕ್ಕಳ ಬೆಳವಣಿಗೆಯ ಹಂತವನ್ನು ಲಘುವಾಗಿ ಪರಿಗಣಿಸುತ್ತೇವೆ. ಅಲ್ಲದೆ ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುವ ಅಥವಾ ವಿಭಿನ್ನ

ಸಾಮರ್ಥ್ಯವನ್ನು ಹೊಂದಿರುವ ಮಕ್ಕಳನ್ನು ನಿಭಾಯಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಮಗು ಇತರರಿಗಿಂತ ಭಿನ್ನವಾಗಿದ್ದರೆ ಏನಾಯ್ತು ? ಅವನು ಅಥವಾ ಅವಳು ಕಲಿಯುವ ರೀತಿಯಲ್ಲಿ ಇಲ್ಲವೆ ಮಗುವು ಸ್ವತಂತ್ರವಾಗಿರು–ವಂತೆ ಬೆಳೆಸಲು ಸಾಧ್ಯವಾಗುವಂತಹ ರೀತಿಯಲ್ಲಿ ಶಿಕ್ಷಣ ನೀಡುತ್ತೇವೆಯೇ ? ಹಾಗಾದರೆ ಪ್ರತಿಯೊಂದು ಶಾಲೆಯಲ್ಲಿಯೂ ಕೂಡಾ ವಿಶೇಷ ಶಿಕ್ಷಕರು ಇರುವುದು ಅಗತ್ಯವಾಗುತ್ತದೆ; ಅದೇನೆ ಇದ್ದರೂ ಕೂಡಾ ಸತ್ಯವು ಅದಕ್ಕಿಂತ ತುಂಬಾ ಭಿನ್ನವಾಗಿದೆ. 'ಸಾಮಾನ್ಯ' ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಕರು ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಶಿಕ್ಷಣ ನೀಡಲಿ ಎಂದುಕೊಳ್ಳಲಾಗುತ್ತದೆ. ಆದರೆ ಸಾಮಾನ್ಯವಾಗಿ ಅವರಿಗೆ ಈ ಕುರಿತು ಯಾವುದೇ ಅನುಭವ ಇರುವುದಿಲ್ಲ ಅಲ್ಲದೆ ಈ ರೀತಿಯ ಮಕ್ಕಳನ್ನು ನಿರ್ವಹಿಸುವಲ್ಲಿ ಹದಿವಯಸ್ಕರಾಗಿರುವ ಇವರಿಗೆ ಎಲ್ಲ ಹದಿವಯಸ್ಕರಂತೆಯೇ ಕೆಲವು ಧೋರಣೆಯ ಅಡಚಣೆಗಳನ್ನು ಕಾಣಬಹುದಾಗಿದೆ ! ಇದು ಶಿಕ್ಷಣದಲ್ಲಿ ನಿಚ್ಚಳವಾಗಿ ಕಾಣಿಸುತ್ತದೆ ಏಕೆಂದರೆ ಅವರು ತಮ್ಮ ವೃತ್ತಿಯ ಕಲಿಕೆಯಲ್ಲಿ ಎಲ್ಲರಿಗೂ ಸಮನಾಗಿ ಕಲಿಸುವುದನ್ನು ಕಲಿತಿರುತ್ತಾರೆಯೇ ಹೊರತು ವಿಶೇಷ ಸಾಮರ್ಥ್ಯದ ಮಕ್ಕಳಿಗಾಗಿನ ವಿಶೇಷ ಕಲಿಕೆಯನ್ನು ಕಲಿತಿರುವುದಿಲ್ಲ.

ಇದು ನಿರ್ವಹಿಸಬಹುದಾದ ಸಾಮಾನ್ಯ ಸ್ಥಿತಿಯಾಗಿರಲಿಲ್ಲ ಮತ್ತು ಶಿಕ್ಷಕರು ಈ ಕುರಿತು ತಮ್ಮ ಕೈಚೆಲ್ಲಿದರು. ಅಲ್ಲದೆ ವಿಶೇಷ ಅಗತ್ಯ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಂತೆ ಶಿಕ್ಷಕರನ್ನು ಹೇಗೆ ತಯಾರು ಮಾಡುವುದು? ಎಂಬುದು ನನಗೆ ಸಮಸ್ಯೆ ಎನಿಸಿತು. ಇದರ ಕುರಿತು ಅಸಮಾಧಾನವಿದೆ ಎಂಬುದು ನನಗೆ ಗೊತ್ತಿತ್ತು ಆದರೆ ಯಾರೂ ಈ ಕುರಿತು ನೇರವಾಗಿ ಮಾತನಾಡುತ್ತಿರಲಿಲ್ಲ. ಈ ಕುರಿತು ಶಿಕ್ಷಕರನ್ನು ಮೊದಲು ತಯಾರು ಮಾಡಬೇಕಾಗಿತ್ತು ಯಾಕೆಂದರೆ ಅವರೇ ಮಗುವನ್ನು ನಿರ್ವಹಿಸುವವರಲ್ಲವೇ.

ನಾವು ಈ ಬಗ್ಗೆ ನಡೆಸಿದ ಸಭೆಯಲ್ಲಿ, ಕೇವಲ ಒಬ್ಬರಲ್ಲ ಎಲ್ಲರೂ ಕೂಡಾ ಶಾಲೆಯಲ್ಲಿರುವ ಈ ಮಗುವಿನ ಜವಾಬ್ಧಾರಿಯನ್ನು ತೆಗೆದುಕೊಳ್ಳಬೇಕು ಎಂದು ನಿರ್ಧರಿಸಲಾಯಿತು. ಇದೊಂದು ತಂಡದ ಪ್ರಯತ್ನವಾಗಿರಬೇಕು ಎಂಬುದು ನಮ್ಮ ಆಶಯವಾಗಿತ್ತು. ಪೋಷಕರ ಜೊತೆ ಒಬ್ಬರು ಪರಸ್ಪರ ಸಂಪರ್ಕ ಇರಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಒಬ್ಬರನ್ನು ತರಗತಿಯ ಮುಖ್ಯಸ್ಥರನ್ನಾಗಿ ಮಾಡಲಾಯಿತು. ಈ ಕೆಲಸವನ್ನು ಪ್ರಾರಂಭಿಸಲು ಕೆಲವು ಸಾಮಾನ್ಯ ಅಂಶಗಳನ್ನು ಅರಿತುಕೊಳ್ಳುವುದು ಮುಖ್ಯವಾಗುತ್ತದೆ. ಅದರಲ್ಲಿ ಕೆಲವನ್ನು ಈ ಕೆಳಗೆ ನೀಡಲಾಗಿದೆ :

1) ಆ ವಿದ್ಯಾರ್ಥಿಗೆ ನೀಡಲಾಗುವ ಸೂಚನೆಗಳು ಸರಳ, ಸ್ಪಷ್ಟ ಮತ್ತು ಸಣ್ಣದಾಗಿರಬೇಕು.
2) ಆದ್ಯತೆಯ ಮೇರೆಗೆ ಪರಿಶೀಲಿಸಬೇಕಾದ ಮಗುವಿನ ಸಮಸ್ಯಾತ್ಮಕ ನಡತೆಯನ್ನು ಶಿಕ್ಷಕರು ಗುರುತಿಸಿ–ಕೊಳ್ಳಬೇಕು.
3) ಶಿಕ್ಷಕರು ಮತ್ತು ಪೋಷಕರ ನಡುವಿನ ವರ್ತನೆಯಲ್ಲಿ ಏಕತೆ, ನಿರಂತರತೆ ಮತ್ತು ಸಾಮ್ಯತೆಯನ್ನು ತರುವ ಸಲುವಾಗಿ ಪೋಷಕರ ಜೊತೆಗೆ ನಿರಂತರ ಸಂಪರ್ಕದಲ್ಲಿರುವಂತೆ ನೋಡಿಕೊಳ್ಳಬೇಕು. ಮನೆಯಲ್ಲಿ ಮತ್ತು ಶಾಲೆಯಲ್ಲಿ ನೀಡುವ ಸೂಚನೆಗಳು ಒಂದೇ ರೀತಿಯಲ್ಲಿರಬೇಕಾಗುತ್ತದೆ. ಅಲ್ಲದೆ ಮಗುವಿನ ಜೊತೆಗೆ ವರ್ತಿಸುವ ರೀತಿಯನ್ನು ಒಬ್ಬರಿಂದೊಬ್ಬರು ಕಲಿತುಕೊಳ್ಳಬೇಕು.
4) ದೀದಿ (ಸಹಾಯಕಿ) ನನ್ನ ಅನುವಾದಕಿಯಾಗಿರಬೇಕು ಏಕೆಂದರೆ ಮಗುವಿಗೆ ಕೇವಲ ಬೆಂಗಾಲಿ ಭಾಷೆ ಮಾತ್ರ ಗೊತ್ತು. ಮಗು ಸ್ವಚ್ಛವಾಗಿರುವಂತೆ ಮತ್ತು ಮಗುವಿನ ಇತರೆ ಅಗತ್ಯತೆಗಳ ಬಗ್ಗೆ ದೀದಿಯು ಲಕ್ಷ್ಯವಹಿಸಬೇಕು.
5) ಅಲ್ಲದೆ ಶೈಕ್ಷಣಿಕ ವಿಷಯಕ್ಕೆ ಪ್ರಾಮುಖ್ಯತೆಯನ್ನು ಕೊಡದೇ ಇರಲು ನಿರ್ಧರಿಸಲಾಯಿತು. ಇದನ್ನು ಪೋಷಕರಿಗೂ ಕೂಡಾ ತಿಳಿಸಿಕೊಡಲಾಯಿತು.
6) ಕ್ಲಾಸ್ ಟೀಚರ್‌ಗೆ ಪ್ರತಿಯೊಂದು ವಿಷಯದ ಕುರಿತು ಮಾಹಿತಿ ನೀಡುತ್ತಿರಬೇಕು ಮತ್ತು ಪೋಷಕರ ಜೊತೆಗೆ ನಿರಂತರ ಸಂಪರ್ಕದಲ್ಲಿರಬೇಕು

ಈ ಎಲ್ಲ ಕಾರ್ಯನಿರ್ವಹಣೆಯ ಅಂಶಗಳು ಯಾವುದೇ ರೀತಿಯಲ್ಲಿ ಸಹಾಯ ಮಾಡಲಾರವು ಎಂದು ನನಗೆ ತಿಳಿದಿದ್ದರೂ ಕೂಡಾ ನಾನು ಇವೆಲ್ಲವನ್ನೂ ಮಾಡಲು ಅವಕಾಶ ನೀಡಿದೆ ಏಕೆಂದರೆ ಎಲ್ಲದಕ್ಕಿಂತ ಹೆಚ್ಚಾಗಿ ಶಿಕ್ಷಕರಿಗೆ ಈ ಮಗುವಿನ ಬಗ್ಗೆ ತಿಳಿದುಕೊಳ್ಳಲು ಸಾಕಷ್ಟು ಸಮಯದ ಅಗತ್ಯವಿದೆ ಎಂದು ನನಗೆ ಗೊತ್ತಿತ್ತು. ನಾನು ನವೆಂಬರ್‌ನಲ್ಲಿ ಶಾಲೆಗೆ ಭೇಟಿ ನೀಡಿದಾಗ, ನಾನಂದುಕೊಂಡಂತೆ ಯಾವುದೂ ಸರಿ ಇಲ್ಲ ಎನಿಸಿತು ಅಲ್ಲದೆ ಶಿಕ್ಷಕರು ಹೆಚ್ಚು ಅಸಹಾಯಕರಾಗಿದ್ದರು ಮತ್ತು ಮಗುವನ್ನು ನಿಯಂತ್ರಿಸಲು ಶಿಕ್ಷಕರು ಹೊಸ ಐಡಿಯಾಗಳಿಲ್ಲದೆ ಖಾಲಿಯಾಗಿದ್ದರು. ಮಗುವಿನ ಕುರಿತ ಅವರ ಅನುಭವಗಳನ್ನು ಬರೆಯಲು ಹೇಳಲಾಯಿತು.

**ಸಾರಾಂಶಗಳು:**

"ಅವಳಿಗೆ ಪ್ರವೇಶ ನೀಡಿದ್ದಾರೆ ಎಂಬುದೇ ನನಗೆ ಆಶ್ಚರ್ಯದ ವಿಷಯ. ಮೇಡಮ್ ತಪ್ಪು ಮಾಡಿದ್ದಾರೆ. ಈ ಮಗುವನ್ನು ವಿಶೇಷ ಮಕ್ಕಳ ಶಾಲೆಗೆ ಸೇರ್ಪಡೆ ಮಾಡಬೇಕಾಗಿತ್ತು. ನನಗೆ

ಅನಿಸಿದೆ ಅವಳ ಮೆದುಳು ಬೆಳೆಯಲಿಲ್ಲ ಎಂಬುದು ಅವಳ ತಪ್ಪಲ್ಲ. ಆದರೆ ನಮ್ಮ ಜೊತೆ ಸೇರಿದ ನಂತರದಲ್ಲಿ ಅವಳ ವರ್ತನೆಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ."

"ಅವಳು ಇಲ್ಲಿಗೆ ಸೇರ್ಪಡೆ ಆದಾಗ, ಇತರ ಹುಡುಗರ ಜೊತೆಗೆ ಅವಳು ಹೇಗೆ ಸೇರುತ್ತಾಳೆ ಎಂಬುದರ ಕುರಿತು ಅನುಮಾನವಿತ್ತು. ಅವಳಿಗೆ ತನ್ನ ಅಗತ್ಯಗಳನ್ನು ಹೇಳೋಕೆ ಕೂಡಾ ಗೊತ್ತಿಲ್ಲವಾಗಿತ್ತು. ಆದರೆ ಈಗ ಅವಳು ತನಗೆ ಏನು ಬೇಕು ಎಂಬುದನ್ನು ಗುರುತಿಸಿ ಸೂಚಿಸುತ್ತಾಳೆ. ಅವಳು ನಮ್ಮನ್ನು ಅರ್ಥ ಮಾಡಿಕೊಳ್ಳುತ್ತಾಳೆ. ನಾನು ಕೂಡಾ ಅವಳನ್ನು ಅರ್ಥ ಮಾಡಿಕೊಳ್ಳೋದು ಸಾಧ್ಯವಾಗಿದೆ. ಕೆಲವು ಸಮಯದ ನಂತರ ಅವಳು ಸರಿ ಹೋಗ್ತಾಳೆ."

"ಅವಳಿಗೆ ಕೆಟ್ಟದ್ದು ಒಳ್ಳೇದು ಎಂಬುದರ ಬಗ್ಗೆ ಗಮನವೇ ಇಲ್ಲ. ಏನಾದರೂ ಮಾಡಿದರೆ ಅದನ್ನು ಅವಳು ಯಾಕೆ ಮಾಡಿದ್ಲು ಎಂಬ ಬಗ್ಗೆ ಕೂಡಾ ಅವಳಿಗೆ ಗೊತ್ತಿಲ್ಲ. ಒಂದು ವೇಳೆ ಅವಳಿಗೆ ಕೆಲವು ಸರಿಯಾದ ಕೆಲಸ ನೀಡಿದರೆ ಅವಳು ಕೆಲಹೊತ್ತು ಆ ಕೆಲಸ ಮಾಡಿಕೊಂಡು ಕುಳಿತಿರುತ್ತಾಳೆ. ಅವಳಿಗೆ ಸೂಚನೆ ನೀಡಿದರೆ ಮಾತ್ರ ಕೆಲಸ ಮಾಡ್ತಾಳೆ. ಉದಾಹರಣೆಗೆ 'ಆಹಾರವನ್ನು ಹಾಳು ಮಾಡಬೇಡ', 'ನಿನ್ನ ಪ್ಲೇಟ್ ಅನ್ನು ತೊಳೆ' ಮುಂತಾದವು. ನನಗನಿಸುತ್ತೆ ಅವಳು ಬೆಳವಣಿಗೆಯ ಸರಿಯಾದ ದಿಕ್ಕಿನಲ್ಲಿದ್ದಾಳೆ. ಮನೆಯ ರೀತಿಯ ಪ್ರೀತಿಯನ್ನೇ ಇಲ್ಲಿ ಪಡೆಯುತ್ತಿದ್ದಾಳೆ. ಇಲ್ಲಿ ಬಂದ ನಂತರದಲ್ಲಿ ಬಹಳಷ್ಟು ವಿಷಯವನ್ನು ಅವಳು ಕಲಿತಿದ್ದಾಳೆ. ಅವಳು ಖುಷಿಯಾಗಿದ್ದಾಳೆ. ನಾನು ಖುಷಿಯಾಗಿದ್ದೇನೆ."

"ಪ್ರಾರಂಭದಲ್ಲಿ ನನಗೆ ಅವಳ ಬಗ್ಗೆ ಭಯ ಇತ್ತು. ಅವಳ ಜೊತೆ ಆದಷ್ಟು ದೂರವಾಗೇ ಇರೋಕೆ ಪ್ರಯತ್ನಿಸಬೇಕು ಅನಿಸ್ತಿತ್ತು. ಕೆಲವೊಮ್ಮೆ ಅವಳನ್ನು ಬೆದರಿಸಿ ದೂರ ಕಳ್ಸೋದು ಕೂಡಾ ಇತ್ತು. ಒಮ್ಮೆ ಅವಳು ಹೂವನ್ನು ತಂದು ನನ್ನ ಕೂದಲಿಗೆ ಮುಡಿಸಿದಳು. ನಾನು ಇಷ್ಟು ದಿನ ತಪ್ಪು ಮಾಡಿದೆ ಅಂತಾ ನನಗೆ ಅನಿಸ್ತು. ನಾನು ಅವಳ ಜೊತೆಗೆ ಮಾತನಾಡೋಕೆ ಪ್ರಾರಂಭಿಸಿದೆ. ನಾನು ಹೆಚ್ಚುವರಿ ತರಗತಿಗಾಗಿ ಅವಳ ತರಗತಿಗೆ ಹೋದಾಗ ಅವಳು ಖುಷಿ ಪಡ್ತಾ ಇದ್ಲು. ಅವಳು ಈ ರೀತಿ ಹುಟ್ಟಿದ್ದು ಅವಳ ತಪ್ಪಲ್ಲ ಎಂದು ನನಗನಿಸ್ತು."

"ಇದೊಂದು ಹೊಸ ಅನುಭವ. ಅವಳು ಇತರ ಹುಡುಗರನ್ನು ನೋಡಿ ಅನುಕರಿಸತೊಡಗಿದಳು."

"ನನಗನಿಸುತ್ತೆ ಅವಳಿಗೆ ಮಾನಸಿಕ ಸಮಸ್ಯೆ ಇರಬೇಕು. ಇತ್ತೀಚಿನ 3 ತಿಂಗಳಲ್ಲಿ ಅವಳಲ್ಲಿ ಹೆಚ್ಚೇನೂ ಬದಲಾವಣೆ ಕಂಡುಬಂದಿಲ್ಲ. ಅವಳು ಶಿಕ್ಷಕರು ಮತ್ತು ಮಕ್ಕಳಿಗೆ ಸಾಕಷ್ಟು ಸಮಸ್ಯೆ ಕೊಟ್ಟಿದ್ದಾಳೆ."

"ಪ್ರಾರಂಭದಲ್ಲಿ ನಾನು ಕಿರಿಕಿರಿ ಮಾಡಿಕೊಳ್ಳುತ್ತಿದ್ದೆ ಮತ್ತು ಸಿಟ್ಟಾಗುತ್ತಿದ್ದೆ. ನನಗನಿಸಿತ್ತು ಅವಳಿಗೆ ಕೆಲಸ ನೀಡಬೇಕು ಅಂತಾ. ಅದಕ್ಕಾಗಿ ಅವಳನ್ನು ನನ್ನ ಪಕ್ಕ ಕೂರಿಸಿಕೊಂಡೆ. ಅವಳಲ್ಲಿ ಬದಲಾವಣೆ ಆಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ಒಂದು ದಿನ ಅವಳು ಇಂಗ್ಲಿಷ್‌ನಲ್ಲಿ ಹೇಳಿದ್ಲು, 'may I come in ma'am?' ನನಗೆ ತುಂಬಾ ಖುಷಿಯಾಯ್ತು."

"ಪ್ರಾರಂಭದಲ್ಲಿ ಅವಳ ತಾಯಿಯು ಜೊತೆಯಲ್ಲಿ ಇಲ್ಲವೆಂದಾದರೆ ಅವಳು ಶಾಲೆಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಆದರೆ ಈಗ ಅವಳು ಒಬ್ಬಳೇ ಕುಳಿತುಕೊಳ್ಳುತ್ತಾಳೆ, ಶಾಲೆಗೆ ಬರುವುದೆಂದರೆ ಅವಳಿಗೆ ಇಷ್ಟ, ಶಿಕ್ಷಕರ ಮಾತನ್ನು ಕೇಳುತ್ತಾಳೆ. ಅವಳನ್ನು ಕುರಿತು ನಾವು ಇನ್ನೂ ಹೆಚ್ಚಿನ ಲಕ್ಷ್ಯವಹಿಸಿದರೆ ಅವಳು ಖಂಡಿತ ಬದಲಾವಣೆ ಹೊಂದುತ್ತಾಳೆ"

"ಅವಳಿಗೆ ಯಾರು ಕಲಿಸ್ತಾರೆ ಎಂದು ನನಗೆ ಆಶ್ಚರ್ಯ–ವಾಗುತ್ತಿತ್ತು. ಕೆಲವು ಸಮಯ ಕಳೆದ ನಂತರದಲ್ಲಿ ಅವಳಲ್ಲಿ ಬದಲಾವಣೆ ಕಂಡುಬಂದಿತು. ಅವಳು ಈಗ ಒಂದು ತಡೆ ಎಂದು ಎನಿಸುತ್ತಿಲ್ಲ."

"ನನಗನಿಸುತ್ತೆ, ಅವಳು ಮಾನಸಿಕವಾಗಿ ಅನಾರೋಗ್ಯ–ವಾಗಿದ್ದಾಳೆ. ಸಾಮಾನ್ಯ ಮಕ್ಕಳ ಜೊತೆ ಅವಳಿಗೆ ನಾವು ಶಿಕ್ಷಣ ನೀಡುವಂತಿಲ್ಲ."

"ಅವಳು ಸೇರ್ಪಡೆಯಾದಂದಿನಿಂದ ಇಂದಿಗೆ ಸಾಕಷ್ಟು ಬದಲಾವಣೆಯನ್ನು ಆಕೆ ಕಂಡಿದ್ದಾಳೆ. ಅವಳು ನಮಗೆ ಹೊಡೆಯುವುದಿಲ್ಲ ಎಂದಾದರೆ ಅವಳ ಸಹಪಾಠಿಗಳಿಗೆ ಯಾಕೆ ಹೊಡೆಯುತ್ತಾಳೆ? ಅವರು ಇವಳ ಹತ್ತಿರ ಏನನ್ನೂ ಹಂಚಿಕೊಳ್ಳುವುದಿಲ್ಲ ಎನಿಸುತ್ತದೆ!"

"ಅವಳು ತನ್ನ ಸ್ನೇಹಿತರು ಹೇಳುವುದನ್ನು ಕೇಳಲು ಪ್ರಾರಂಭಿಸಿದ್ದಾಳೆ. ಅವರು 'ಮಾಡಬೇಡ' ಎಂದು ಹೇಳುವುದನ್ನು ಅವಳು ಮಾಡುವುದಿಲ್ಲ. ಅವಳ ಮೇಲೆ ಲಕ್ಷ್ಯವಹಿಸಲಿ ಎಂದು ಅವಳು ಬಯಸುತ್ತಾಳೆ. ಅವಳು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ್ದಾಳೆ ಮತ್ತು ಜನರ ಜೊತೆ ಬೆರೆಯುತ್ತಿದ್ದಾಳೆ."

ಪ್ರತಿಕ್ರಿಯೆಯನ್ನು ನೋಡಿದಾಗ ಕಂಡುಬಂದಂತೆ ಕೆಲವರನ್ನು ಹೊರತು ಪಡಿಸಿ ಇನ್ನುಳಿದವರೆಲ್ಲರೂ ಅವಳಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಕಂಡುಕೊಂಡಿದ್ದಾರೆ. ಅಲ್ಲದೆ ಅವಳು ಹ್ಯಾಗಿದ್ದಾಳೆಯೋ ಹಾಗೆ ಅವಳನ್ನು ಎಲ್ಲರೂ ಒಪ್ಪಿಕೊಳ್ಳಲು ಪ್ರಾರಂಭಿಸಿದ್ದಾರೆ. ಅಲ್ಲದೆ ಉಳಿದ ಮಕ್ಕಳ ಜೊತೆಗೆ ಅವಳನ್ನು ನೋಡಲು ಪ್ರಾರಂಭಿಸಿದ್ದಾರೆ. ಮೂರನೇ ತರಗತಿಯ ಮಕ್ಕಳು ಅವಳು ಯಾವ್ಯಾವಾಗ ಮೊಂಡು ಹಟ ಮಾಡುತ್ತಾಳೆಯೋ ಅಥವಾ ಸಾಮಾಜಿಕವಾಗಿ ಒಪ್ಪಿಕೊಳ್ಳದ

ವರ್ತನೆ ತೋರ್ಪಡಿಸುತ್ತಾಳೆಯೋ ಆಗ ಅವಳಿಗೆ ವಾಪಸ್ ಹೊಡೆಯುವ ಅಥವಾ ಅವಳಿಗೆ ಕೀಟಲೆ ಮಾಡುವ ಬದಲಿಗೆ 'ಮಾಡಬೇಡ' ಎಂದು ಹೇಳುವುದನ್ನು ರೂಢಿಸಿಕೊಂಡಿದ್ದಾರೆ.

ಆಡ್ಮಿನ್ ಹಾಗೂ ಪ್ರಿನ್ಸಿಪಲ್ ಕೂಡಾ ಅವಳೊಂದಿಗೆ ಆಗಾಗ ಮಾತನಾಡುವ ಮೂಲಕ ಹಾಗೂ ಅವಳಿಗೆ ಕೆಲವು ಅಕ್ಷರಗಳನ್ನು ಹೇಳಿಕೊಡುವ ಮೂಲಕ ಅವಳ ಜೊತೆಗೆ ಸಂಪರ್ಕ ಇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅವಳು ಬಣ್ಣ ಹಚ್ಚುವುದರಲ್ಲಿ ಆಸಕ್ತಿಯನ್ನು ತೋರ್ಪಡಿಸಿದ್ದಾಳೆ. ಕೆಲವು ವರ್ಕ್‌ಶೀಟ್‌ಗಳನ್ನು (ಬಣ್ಣಹಚ್ಚುವುದು, ಕಾಗುಣಿತಗಳನ್ನು ಬರೆಯುವುದು ಮುಂತಾದವುಗಳನ್ನು) ಅವಳ ಕೈಗೆ ಸಿಗುವಂತೆ ಇಡಲಾಗಿದೆ. ಅವಳು ತರಗತಿಗೆ ಬಂದನಂತರದಲ್ಲಿ ಶಿಕ್ಷಕರು ಇದನ್ನು ಅವಳಿಗೆ ನೀಡುತ್ತಿದ್ದಾರೆ. ಕೆಲವೊಮ್ಮೆ ಕೆಲವು ಶೀಟ್‌ಗಳನ್ನು ಮನೆಗೆ ಕೂಡಾ ನೀಡಲಾಗುತ್ತದೆ.

ಶೈಕ್ಷಣಿಕ ವರ್ಷದ ಕೊನೆಯಲ್ಲಿ ಪ್ರಗತಿ ಪತ್ರ ಕೊಡುವ ಒಂದು ಸವಾಲು ನಮಗೆ ಎದುರಾಯಿತು. ಪ್ರಗತಿ ಪತ್ರದಲ್ಲಿ ಏನು ಬರೆಯುವುದು ? ತಂಡವು ಈ ಹಂತದಲ್ಲಿ ಮತ್ತೊಮ್ಮೆ ಸಭೆ ಸೇರಿ ಅವಳ ಬಗ್ಗೆ ಉತ್ತಮ ಅಂಶಗಳನ್ನು ಮತ್ತು ಅವಳು ಅಭಿವೃದ್ಧಿ ಹೊಂದಿದ ಅಂಶಗಳನ್ನು ಗುರುತಿಸಿದರು.

**ಈ ಮುಂದಿನ ಅಂಶಗಳನ್ನು ಇಲ್ಲಿ ಕಂಡುಕೊಳ್ಳಲಾಯಿತು:**

- ಅವಳು ಅಲ್ಲಿ ಇಲ್ಲಿ ಅಲೆದಾಡುವುದನ್ನು ನಿಲ್ಲಿಸಿದ್ದಾಳೆ.
- ಪುಸ್ತಕಗಳನ್ನು ನೋಡುವುದು, ಪ್ರಶ್ನೆಗಳನ್ನು ಕೇಳವುದನ್ನು ಮಾಡುತ್ತಿದ್ದಾಳೆ.
- ಸರಳವಾದ ಸೂಚನೆಗಳನ್ನು ಅನುಸರಿಸುತ್ತಿದ್ದಾಳೆ.
- ಅವಳು ತನ್ನ ಸಹಪಾಠಿಗಳನ್ನು ಅನುಸರಿಸುತ್ತಾಳೆ ಮತ್ತು ಹಾಡಲು ಪ್ರಯತ್ನಿಸುತ್ತಿದ್ದಾಳೆ.
- ಶುಚಿತ್ವದ ಬಗ್ಗೆ ತರಬೇತಿಗೊಂಡಿದ್ದಾಳೆ ಮತ್ತು ಇನ್ನೂ ಹಲವಾರು

**ಕಾಳಜಿವಹಿಸಬೇಕಾದ ಅಂಶಗಳು**

- ಕೆಲವೊಂದು ಸಮಯ ಅವಳು ತುಂಬಾ ಆಕ್ರಮಣಕಾರಿ–ಯಾಗಿರುವುದು ಮುಂದುವರೆದಿದೆ
- ಪೇಪರ್ ಹರಿಯುತ್ತಾಳೆ

ಪ್ರತಿಯೊಬ್ಬರು ಆಶ್ಚರ್ಯವಾಗುವಂತೆ 10 ಕಾಳಜಿವಹಿಸ–ಬೇಕಾದ ಅಂಶಗಳ ಜೊತೆಗೆ ಅವಳಿಗೆ ದೊರೆತ ಉತ್ತಮ ಅಂಶಗಳು 29 !

ಈ ಕುರಿತಂತೆ ಪೋಷಕರು ಮತ್ತು ಶಿಕ್ಷಕರ ಸಭೆಯಲ್ಲಿ ಇಬ್ಬರನ್ನೂ ನೋಡುವುದು ತುಂಬಾ ಖುಷಿ ಎನಿಸುವ ವಿಷಯವಾಗಿತ್ತು. ಅವರು ಹೇಳಿದರು "ನಮ್ಮ ಮಗು ಶಾಲೆಗೆ ಬರುವುದನ್ನು ನೋಡುವುದೇ ನಮಗೆ ಖುಷಿಯ ವಿಷಯವಾಗಿದೆ. ಅವಳು ಪುಸ್ತಕಗಳನ್ನು ನೋಡುತ್ತಾ ಮತ್ತು ಶಾಲೆಯಲ್ಲಿ ನಡೆದ ವಿಚಾರಗಳನ್ನು ಹೇಳುತ್ತಾ ತಾನು ತುಂಬಾ ಬ್ಯೂಸಿಯಾಗಿರುವಂತೆ ನಟಿಸುತ್ತಾಳೆ. ಇದೆಲ್ಲಕ್ಕಿಂತ ಹೆಚ್ಚಾಗಿ ಅವಳನ್ನೂ ಕೂಡಾ ಒಬ್ಬ ಸಾಮಾನ್ಯ ಮನುಷ್ಯನಂತೆ ನೋಡಿರುವುದು ಮತ್ತು ಅವಳಿಗೂ ಸ್ನೇಹಿತರು ಇರುವಂತೆ ಮಾಡಿದ್ದು ತುಂಬಾ ಖುಷಿಯೆನಿಸುತ್ತದೆ."

ಶಿಕ್ಷಕರಿಗೆ ನಿಜವಾಗಿಯೂ ಹಲವಾರು ಅಂಶಗಳನ್ನು ತಿಳಿದುಕೊಳ್ಳಲು ಸಮಯ ಮತ್ತು ಸ್ಥಳದ ಅಗತ್ಯವಿದೆ. ಹಲವಾರು ಅಂಶಗಳನ್ನು ತಿಳಿದುಕೊಳ್ಳಲು ಸ್ಥಳ ಮತ್ತು ಸಮಯಾವಕಾಶವನ್ನು ನೀಡಿದ್ದರಿಂದ ಮಗುವನ್ನು ಒಪ್ಪಿಕೊಳ್ಳುವ ಹಂತಕ್ಕೆ ತಲುಪಿದ್ದರು. ಈಗ ಮಗುವನ್ನು ನಿಭಾಯಿಸಲು ಅವರು ತಮ್ಮದೆ ಆದ ಕಾರ್ಯನಿರ್ವಹಣೆಯ ಐಡಿಯಾಗಳ ಜೊತೆಗೆ ಬರುತ್ತಿದ್ದಾರೆ. ನನಗನಿಸುತ್ತದೆ ಇದು ಮಗು ಹಾಗೂ ಶಿಕ್ಷಕ ಇಬ್ಬರನ್ನೂ ಸ್ವತಂತ್ರವಾಗಿಸುವ ನಿಟ್ಟಿನಲ್ಲಿ ಕೊನೆಗೊಳ್ಳುತ್ತದೆ.

**ಮಕ್ಕಳು ತಾರತಮ್ಯ ಮಾಡುವುದಿಲ್ಲ. ಬದಲಾಗಿ,**
**ನಾವು ಈ ರೀತಿಯ ವ್ಯತ್ಯಾಸವನ್ನು ಒಪ್ಪಿಕೊಳ್ಳಲು ಸಾಧ್ಯವಾಗದೇ ತಾರತಮ್ಯ ಮಾಡುತ್ತೇವೆ.**



**ಅರುಣಾ ವಿ ಪ್ರಸಾದ್** ಅವರು ಪ್ರಸ್ತುತ ಅಜೀಂ ಪ್ರೇಂಜಿ ಪ್ರತಿಷ್ಠಾನದ ಸ್ಕೂಲ್ಸ್ ಸೆಂಟ್ರಲ್ ಟೀಮ್ ನಲ್ಲಿ ವೃತ್ತಿ ನಿರತರಾಗಿದ್ದಾರೆ. ಪ್ರತಿಷ್ಠಾನವನ್ನು ಸೇರುವ ಮೊದಲು ಅವರು ಹೈದರಾಬಾದಿನ ಇಂಡಸ್ ಇಂಟರ್ ನ್ಯಾಷನಲ್ ಸ್ಕೂಲ್‌ನ ಸಲಹೆ ಮತ್ತು ವಿಶೇಷ ವಿದ್ಯಾಭ್ಯಾಸ ಅಗತ್ಯತೆಗಳ ವಿಭಾಗದ ಮುಖ್ಯಸ್ಥರಾಗಿ ಅಲ್ಲಿ ಪಾಠವನ್ನೂ ಮಾಡುತಿದ್ದರು.ಅದಕ್ಕೂ ಮೊದಲು ಅವರು ಕೃಷ್ಣಮೂರ್ತಿ ಫೌಂಡೇಷನ್ ಆಫ್ ಇಂಡಿಯಾ ಚೆನ್ನೈ ಅವರ "ದ ಸ್ಕೂಲ್" ನಲ್ಲಿ ಶಿಕ್ಷಕರಾಗಿದ್ದು ಮಿಶ್ರ ವಯಸ್ಕರ ಕಾರ್ಯಕ್ರಮ ಪ್ರಯೋಗದ ತಂಡದಲ್ಲಿ ಒಬ್ಬರಾಗಿದ್ದರು.ತರುವಾಯ ಅವರು ಆಂಧ್ರಪ್ರದೇಶದ ಮದನಪಲ್ಲಿ ಬಳಿಯ ಖುಷಿ ವ್ಯಾಲಿ ಶಾಲೆಯಲ್ಲಿ ಬಲು ನಿಧಾನ ಕಲಿಕೆಯ ವಿದ್ಯಾರ್ಥಿಗಳಿಗೆ ಚಟುವಟಿಕೆಯ ಕೇಂದ್ರವನ್ನು ಪ್ರಾರಂಭಿಸಿದರು. ಇದಲ್ಲದೆ ಗುರುಗಾಂವ್ ನ ಪಾತ್ ವೇಸ್ ಮತ್ತು ಜಿ.ಡಿ.ಗೊಯೆಂಕಾ ವರ್ಲ್ಡ್ ಸ್ಕೂಲ್‌ನಲ್ಲಿ ಅವರು ಸಮಾಲೋಚಕರು ಮತ್ತು ಶಿಕ್ಷಕರಾಗಿ ತಮ್ಮ ದೀರ್ಘಕಾಲೀನ ಪ್ರಯಾಣದಲ್ಲಿ ಶಿಕ್ಷಕರು ಮತ್ತು ಮಕ್ಕಳಿಗಾಗಿ ಅನೇಕ ಬಗೆಯ ಚಟುವಟಿಕೆಗಳನ್ನು ರೂಪಿಸಿದ್ದಾರೆ. ಅವರನ್ನು aruna.v@azimpremjifoundation.org ನಲ್ಲಿ ಸಂಪರ್ಕಿಸಬಹುದು.